ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಸಂಖ್ಯೆ: ಕಾನಿರಾ/ಇತರೆ/2023-24

ಕಾರ್ಮಿಕ ನಿರೀಕ್ಷಕರ ಕಛೇರಿ
ರಾಣೇಬೆನ್ನೂರು ವೃತ್ತ, ರಾಣೇಬೆನ್ನೂರು
ದಿನಾಂಕ:29-01-2024.

## ಸಾರ್ವಜನಿಕ ಪ್ರಕಟಣೆ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಾಯ್ದೆ 1996 ಕಲಂ 12 ಪ್ರಕಾರ 18 ರಿಂದ 60 ವರ್ಷದೊಳಗಿನ ಕಾರ್ಮಿಕರು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿಸಲು ಹಾಗೂ ಕರ್ನಾಟಕ ನಿಯಮ 20(A) ರನ್ವಯ ನವೀಕರಣಗೊಳಿಸಿಕೊಳ್ಳಲು ಅವಕಾಶವಿರುತ್ತದೆ. ನೋಂದಣಿ ಪೂರ್ವದ 1 ವರ್ಷದ ಅವಧಿಯಲ್ಲಿ ಕನಿಷ್ಠ 90 ದಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ಮಾಡಿರಬೇಕು. ಕಲಂ 14 ರ ಪ್ರಕಾರ ವರ್ಷದಲ್ಲಿ ಕನಿಷ್ಠ 90 ದಿನ ಕೆಲಸ ಮಾಡದಿದ್ದಲ್ಲಿ ಅಂತಹ ಕಾರ್ಮಿಕರ ನೋಂದಣಿಯನ್ನು ರದ್ದುಪಡಿಸಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ದಿನಾಂಕ: 21-11-2023 ರಿಂದ 02-12-2023 ರ ವರೆಗೆ ಹಾವೇರಿ ಜಿಲ್ಲೆಯಲ್ಲಿ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ 07 ತಂಡಗಳು ನೋಂದಾಯಿತ ಕಟ್ಟಡ ಕಾರ್ಮಿಕರ ಪರಿಶೀಲನೆ ನಡೆಸಿದ್ದು, ಪರಿಶೀಲನೆ ಸಂದರ್ಭದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಲ್ಲದ ಹಲವಾರು ಅನರ್ಹ ವ್ಯಕ್ತಿಗಳು ಫಲಾನುಭವಿಗಳಾಗಿ ನೋಂದಣಿಯಾಗಿರುವುದು ಕಂಡು ಬಂದಿರುತ್ತದೆ. ಇಂತಹ ನೈಜ ಕಟ್ಟಡ ಕಾರ್ಮಿಕರಲ್ಲದ ವ್ಯಕ್ತಿಗಳ ನೋಂದಣಿಯನ್ನು ರದ್ದುಪಡಿಸಲಾಗುತ್ತಿದೆ. ಆದ್ದರಿಂದ ಸಂಬಂಧಿಸಿದವರ ಮಾಹಿತಿಯನ್ನು ಸಂಬಂಧಪಟ್ಟ ಕಾರ್ಮಿಕ ನಿರೀಕ್ಷಕರ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಮಂಡಳಿಯ ವೆಬ್ ಸೈಟ್: https://karbwwb.karnataka.gov.in ನಲ್ಲಿ ಪ್ರಕಟಿಸಲಾಗಿದೆ. ಈ ಬಗ್ಗೆ ಸಂಬಂಧಿಸಿದವರು ಯಾವುದೇ ಆಕ್ಷೇಪಣೆಗಳಿದ್ದಲ್ಲಿ 07 ದಿನದೊಳಗಾಗಿ ಲಿಖಿತ ರೂಪದಲ್ಲಿ ಸಂಬಂಧಿಸಿದ ಹಿರಿಯ/ಕಾರ್ಮಿಕ ನಿರೀಕ್ಷಕರಿಗೆ ಸಲ್ಲಿಸಲು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ

ಕಾರ್ಮಿಕ ನಿರೀಕ್ಷಕರು
ರಾಣೇಬೆನ್ನೂರು ವೃತ್ತ ರಾಣೇಬೆನ್ನೂರು

ಕಾರ್ಮಿಕ ನಿರೀಕ್ಷಕರು
ರಾಣೇಬೆನ್ನೂರು ವೃತ್ತ
ರಾಣೇಬೆನ್ನೂರು